ಶ್ರೀ ಎಸ್. ಸುರೇಶ್ ಕುಮಾರ್ :— ಯಾರೋ ಒಬ್ಬರಿಗೆ ಮಾತ್ರ ಆಥರೈಸ್ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೇ ಕಾಗೇರಿ :— ಉತ್ತರ ಕೊಡದೇ (xxx) ಮಾಡುವವರು ಆಡಳಿತ ಪಕ್ಷದವರು ...

ಅಧ್ಯಕ್ಷರು :— ಮಧ್ಯೆ ಮಧ್ಯೆ ಹೀಗೆ ನಿಂತು ಮಾತನಾಡಿದರೆ ಹೇಗೆ? ಯಾವುದನ್ನೂ ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ (xxx) ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು

(ಗೊಂದಲ)

ಅಧ್ಯಕ್ಷರು :— ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮುಕ್ತಾಯಗೊಂಡಿದೆ. ಮಾನ್ಯ ಸಗೀರ್ ಅಹಮದ್‌ರವರೇ, ಮಾನ್ಯ ಪಾಪಣ್ಣನವರ ಪ್ರಶ್ನೆಗೆ ಈಗ ಉತ್ತರ ಕೊಡಿ.

ಹುಣಸೂರು ಟೌನ್ ಬೈಪಾಸ್ (ರಾಜ್ಯ ಹೆದ್ದಾರಿ) ರಸ್ತೆಯಲ್ಲಿ ಅನಧಿಕೃತವಾಗಿ ವಾಣಿಜ್ಯ ಮಳಿಗೆ, ಹೋಟೆಲ್, ಬಾರ್‌ಗಳಿಂದ ತೊಂದರೆ

293 (3444) ಶ್ರೀ ಪಾಪಣ್ಣ ವಿ. (ಹುಣಸೂರು) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ಟೌನ್ ಬೈ-ಪಾಸ್ ರಸ್ತೆಯಾದ ಬೆಂಗಳೂರು-ಭಂಟ್ವಾಳ್ ರಾಜ್ಯ ಹೆದ್ದಾರಿ ರಸ್ತೆಯಾಗಿದ್ದು ಮತ್ತು ಅತಿ ಮುಖ್ಯ ರಸ್ತೆಯಾಗಿ ಈ ರಸ್ತೆಯಲ್ಲಿ ವಾಹನ ಸಂಚಾರವು ಹೆಚ್ಚು ಇದ್ದು, ರಸ್ತೆಯ ಪಕ್ಕ ಅನಧಿಕೃತ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಂದ, ರಸ್ತೆಬದಿ ವಾಣಿಜ್ಯ ಕೇಂದ್ರವಾಗುತ್ತಿರುವುದರಿಂದ ಈ ಹಿಂದೆ ಇಲ್ಲಿ ಒಂದು ಕೊಲೆಯೂ ಸಹ ನಡೆದು ಆಗಾಗ್ಗೆ ಅಪಘಾತಗಳು ಈ ಸ್ಥಳದಲ್ಲಿ ಸಂಭವಿಸಿದ್ದು, ಇದನ್ನು ತಪ್ಪಿಸಲು ಸರ್ಕಾರವು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಈ ಸ್ಥಳಗಳನ್ನು ತೆರವುಗೊಳಿಸಲು ಆದೇಶಿಸಿರುವುದು ನಿಜವೇ?

ಪೌರಾಡಳಿತ ಸಚಿವರ ಪರವಾಗಿ ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :—

ಅ) ಹೌದು.

---

xxx ಈ ಪದವನ್ನು ಅಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಿ. ಪಾಪಣ್ಣ:— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, ಹುಣಸೂರು ಟೌನ್ ಬೈ-ಪಾಸ್ ರಸ್ತೆಯಿಂದ ಬೆಂಗಳೂರು ಭಂಟ್ವಾಳ ರಸ್ತೆ ರಾಜ್ಯ ಹೆದ್ದಾರಿ ರಸ್ತೆಯಾಗಿದ್ದು ಮತ್ತು ಅತಿ ಮುಖ್ಯ ರಸ್ತೆಯಾಗಿ, ಈ ರಸ್ತೆಯಲ್ಲಿ ವಾಹನ ಸಂಚಾರವು ಹೆಚ್ಚು ಇದ್ದು ರಸ್ತೆಯ ಪಕ್ಕ ಅನಧಿಕೃತ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಂದ ರಸ್ತೆ ಬದಿ ವಾಣಿಜ್ಯ ಕೇಂದ್ರವಾಗುತ್ತಿರುವುದರಿಂದ ಈ ಹಿಂದೆ ಒಂದು ಕೊಲೆಯೂ ಸಹ ಇಲ್ಲಿ ನಡೆದು ಆಗಾಗ್ಗೆ ಅಪಘಾತಗಳು ಈ ಸ್ಥಳದಲ್ಲಿ ಸಂಭವಿಸಿದ್ದು, ಇದನ್ನು ತಪ್ಪಿಸಲು ಸರ್ಕಾರವು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಈ ಸ್ಥಳಗಳನ್ನು ತೆರವುಗೊಳಿಸಲು ಆದೇಶಿಸಿರುವುದು ನಿಜವೆ? ನನ್ನ ಪ್ರಶ್ನೆಗೆ "ಹೌದು" ಎಂದು ಹೇಳಿದ್ದಾರೆ. ಆದರೆ ಯಾವುದೇ ತೆರವುಗೊಳಿಸುವ ಕ್ರಮ ತೆಗೆದುಕೊಂಡಿಲ್ಲ. ಈ ರಸ್ತೆ ಪಿಡಬ್ಲ್ಯೂಡಿಗೆ ಸೇರುತ್ತದೆ, ಲೈಸನ್ಸ್ ಕೊಡುವುದು ನಗರಾಭಿವೃದ್ಧಿ ಇಲಾಖೆಗೆ ಸೇರುತ್ತದೆ. ಕಂದಾಯ ಇಲಾಖೆಯವರು ಯಾವುದೇ ಹಾಲದಲ್ಲಿ ಯಾವುದೇ ಕೆಎಸ್‌ಆರ್‌ಟಿಸಿ ಬಸ್ ನಿಲ್ಲಿಸಬಾರದು ಎಂದು ಬೋರ್ಡ್ ಹಾಕುತ್ತಾರೆ. ಕೆಎಸ್‌ಆರ್‌ಟಿಸಿಯವರು ಬಸ್ ನಿಲ್ಲಿಸುತ್ತಾರೆ. ಗೃಹ ಇಲಾಖೆಯವರು ಪೋಲಿಸ್‌ನವರು ಅದನ್ನು ತೆರವು ಮಾಡಬೇಕು. ನನ್ನ ಪ್ರಶ್ನೆಯಲ್ಲಿ ಇನ್ನೂ ಎರಡು ಪ್ರಶ್ನೆಗಳನ್ನು ಸೇರಿಸಿದ್ದೆ, ಅದನ್ನು ಕಡಿತ ಮಾಡಿ ಈ ಪ್ರಶ್ನೆ ಕಳುಹಿಸಿದ್ದಾರೆ. ಈ ಐದು ಇಲಾಖೆಗಳು ಸೇರಿದರೆ ಮಾತ್ರ ಆ ರಸ್ತೆ ಸುಗಮವಾಗಿ ನಡೆಯುತ್ತದೆ. ಕ್ರಮ ತೆಗೆದುಕೊಳ್ಳಲು ನಾವು ಆದೇಶಿಸಿದ್ದೇವೆಂದು ಹೇಳಿದರು. ಆದರೆ ಗೃಹ ಇಲಾಖೆ ಅದನ್ನು ಸರಿಯಾಗಿ ಕಾರ್ಯಗತಗೊಳಿಸುತ್ತಿಲ್ಲ, ಕೆಎಸ್‌ಆರ್‌ಟಿಸಿ ಬಸ್ ಕೂಡ ನಿಲ್ಲಿಸಬಾರದು ಎಂದು ಆದೇಶವಿದ್ದರೂ ಕೂಡ ಅಲ್ಲಿಯೇ ನಿಲ್ಲಿಸುತ್ತಿದ್ದಾರೆ. ಇಲ್ಲಿ ಒಂದು ಕೊಲೆ ಮತ್ತು ಎರಡು ಆಕ್ಸಿಡೆಂಟ್‌ಗಳಾಗಿವೆ. ದಯಮಾಡಿ ಇದನ್ನು ಯಾವ ಕಾರಣದಿಂದಲಾದರೂ ಆ ಬೈ-ಪಾಸ್ ರಸ್ತೆ ಸುಗಮವಾಗಿ ಸಂಚಾರವಾಗುವುದಕ್ಕೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:— ಈ ವಿಷಯದಲ್ಲಿ ಪರವಾನಗಿ ನೀಡುವುದು ನಾಲ್ಕೈದು ಇಲಾಖೆಗೆ ಸಂಬಂಧಪಟ್ಟ ವಿಚಾರ. ಲೋಕೋಪಯೋಗಿ ಇಲಾಖೆ ಯಾವ ಯಾವ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಗಳಿವೆ, ರಾಜ್ಯ ಹೆದ್ದಾರಿಗಳು ಹಾದು ಹೋಗುವ ಹಳ್ಳಿಗಳಿರಬಹುದು, ಪಟ್ಟಣಗಳಿರಬಹುದು ರಸ್ತೆಯನ್ನು ವಿಸ್ತೀರ್ಣ ಮಾಡುವ ಸಂದರ್ಭದಲ್ಲಿ ರಸ್ತೆ ಮಧ್ಯ ಭಾಗದಿಂದ ಎಷ್ಟು ಅಡಿ, ಎಷ್ಟು ಮೀಟರ್ ಒಳಗೆ ಹೊಸ ಕಟ್ಟಡ ನಿರ್ಮಾಣ ಮಾಡಬೇಕೆಂದು ಏನು ನಿಯಮ ಇದೆ, ಆ ನಿಯಮದಂತೆ ರಸ್ತೆ ಮಧ್ಯ ಬಾಗದಿಂದ 150 ಅಡಿ ಬಿಟ್ಟು ಮನೆಗಳು ನಿರ್ಮಾಣ ಮಾಡುವುದರ ಬಗ್ಗೆ ಸರ್ಕಾರದ ನೇರವಾದ ಆದೇಶ ಇದೆ. ನಗರಾಭಿವೃದ್ಧಿ ಪ್ರಾಧಿಕಾರದವರೂ ಕೂಡ ಪಿಡಬ್ಲ್ಯೂಡಿಯವರ ಒಪ್ಪಿಗೆ ಮೇರೆಗೆ ಪರವಾನಗಿ ನೀಡಬೇಕೆ ವಿನಹ ನೇರವಾಗಿ ಅವರಿಗೆ ಪರವಾನಗಿ ನೀಡುವುದಕ್ಕೆ ಬರುವುದಿಲ್ಲ. ಶಾಸಕರು ಹಾಕಿರುವ ಪ್ರಶ್ನೆ

ಅನಧಿಕೃತ ಕಟ್ಟಡಗಳ ಬಗ್ಗೆ ಇದೆ, ಇದು ಅನಧಿಕೃತವೆಂದು ಸರ್ಕಾರಕ್ಕೆ ಮನವರಿಕೆಯಾಗಿದೆ, ಆದುದರಿಂದ ತಕ್ಷಣವೇ ಇದನ್ನು ತೆರವುಗೊಳಿಸುವುದರ ಬಗ್ಗೆ ನಿರ್ದೇಶನ ಕೊಡುತ್ತೇವೆ. ನಮ್ಮ ರಸ್ತೆಯ ಮಾರ್ಜಿನ್ ಒಳಗಡೆ ಇರುವ ಕಟ್ಟಡಗಳನ್ನು ತೆರವುಗೊಳಿಸುವುದಕ್ಕೆ ಸರ್ಕಾರ ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಪಾಪಣ್ಣ :— ಪಿಡಬ್ಲ್ಯೂಡಿಯವರು ಎನ್‌ಓಸಿ ಕೊಟ್ಟಿಲ್ಲ, ನಗರಾಭಿವೃದ್ಧಿ ಸಚಿವರು ಪುರಸಭೆಯವರೂ ಕೂಡ ಎನ್‌ಓಸಿ ಕೊಟ್ಟಿಲ್ಲ. ಕಂದಾಯ ಇಲಾಖೆಯವರು ತಹಸೀಲ್ದಾರ್‌ರವರೂ ಕೂಡ ಈ ರಸ್ತೆಯಲ್ಲಿ ಯಾವುದೇ ಸಮಯದಲ್ಲಿ ಬಸ್ ನಿಲ್ಲಿಸಬಾರದು ಎಂದು ಬೋರ್ಡ್ ಹಾಕಿದ್ದಾರೆ. ತಾವೂ ಕೂಡ ಆದೇಶ ಮಾಡಿದ್ದೀರಿ. ಪೋಲೀಸ್‌ನವರೂ ಕೂಡ ಇಲ್ಲಿ ಯಾವುದಾದರೂ ಬಸ್ ನಿಂತರೆ ದಂಡ ವಿಧಿಸಲಾಗುವುದು ಎಂದು ಬೋರ್ಡ್ ಹಾಕಿದ್ದಾರೆ. ಈ ಐದು ಆದೇಶಗಳಿದ್ದರೂ ಕೂಡ ಕಾರ್ಯಗತವಾಗಿಲ್ಲ. ದಯಮಾಡಿ ಈ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ತಾವು ವ್ಯವಸ್ಥೆ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿವೆ ಎನ್ನುವುದು ಮಾನ್ಯ ಸದಸ್ಯರ ಮೂಲಭೂತವಾದ ಪ್ರಶ್ನೆ. ಇದು ಸರ್ಕಾರಕ್ಕೆ ಮನದಟ್ಟಾಗಿದೆ, ಅನಧಿಕೃತವಾಗಿ ಕಟ್ಟಲಾಗಿರುವ ಕಟ್ಟಡಗಳನ್ನು ತೆರವುಗೊಳಿಸುತ್ತೇವೆ.

ಶ್ರೀ ವಿ. ಪಾಪಣ್ಣ :— ತಮ್ಮ ಬಸ್‌ಗಳನ್ನು ನಿಲ್ಲಿಸಬಾರದು ಎಂದು ಆದೇಶ ಕೊಟ್ಟರೂ ನಿಮ್ಮ ಆದೇಶಕ್ಕೆ ವಿರುದ್ಧವಾಗಿ ಅಲ್ಲಿ ಬಸ್‌ಗಳನ್ನು ನಿಲ್ಲಿಸುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಾನು ಅಧಿಕಾರಿಗಳಿಗೆ ಸೂಚನೆ ಕೊಡುವುದರ ಮೂಲಕ ಬಸ್‌ಗಳನ್ನು ಅಲ್ಲಿ ನಿಲ್ಲಿಸಲು ಅವಕಾಶವಿಲ್ಲದ ಹಾಗೆ ವ್ಯವಸ್ಥೆ ಮಾಡುತ್ತೇನೆ.

ಅಂಬೇಡ್ಕರ್ ವಸತಿ ಯೋಜನೆ.

294(3051) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ನಿರ್ಮಾಣ ಮಾಡುವ ಮನೆಗಳಿಗೆ 20,000 ರೂ. ಮಂಜೂರು ಮಾಡಿದ್ದು ಅದನ್ನು ಕನಿಷ್ಠ 35,000 ರೂ.ಗಳಿಗೆ ಏರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಇಲ್ಲ.